ಆ) ಕಾಂಟ್ರಾಕ್ಟ್ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ? ಈ ವೈದ್ಯರನ್ನು ಖಾಯಂ ಮಾಡಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಇ) ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯರನ್ನು ನೇಮಕಗೊಳಿಸುವ ಕಾರ್ಯವನ್ನು ಇನ್ನೂ ಕೈಗೊಳ್ಳದಿರಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

ಡಾ ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಸಚಿವರು)

ಆ) ರಾಜ್ಯದಲ್ಲಿ 739 ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇರುತ್ತದೆ.

573 ವೈದ್ಯಾಧಿಕಾರಿಗಳನ್ನು ಭರ್ತಿಮಾಡುವ ಕಾರ್ಯ ಪ್ರಕ್ರಿಯೆಯಲ್ಲಿದೆ ಹಾಗೂ ಜಿಲ್ಲಾಧಿಕಾರಿಗಳ ಮುಖಾಂತರ ಗುತ್ತಿಗೆ ವೈದ್ಯಾಧಿಕಾರಿಗಳನ್ನು ಸಹ ನೇಮಕಾತಿ ಮಾಡಲಾಗುತ್ತಿದೆ.

ಆ) ಈ ವರೆಗೆ 3118ಗುತ್ತಿಗೆ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿದೆ. 1272 ಗುತ್ತಿಗೆ ವೈದ್ಯಾಧಿಕಾರಿಗಳು ಹಾಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಮತ್ತು 180ಗುತ್ತಿಗೆ ವೈದ್ಯಾಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸಲಾಗಿದೆ. ಬೇರೆ 138 ಗುತ್ತಿಗೆ ವೈದ್ಯಾಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ.

ಇ) ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಂಜೂರಾದ ಮಹಿಳಾ ವೈದ್ಯಾಧಿಕಾರಿ ಹುದ್ದೆಗಳು ಇರುವುದಿಲ್ಲ. ಕೆಲವು ವೇಳೆ ಮಹಿಳಾ ವೈದ್ಯಾಧಿಕಾರಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸಲು ಇಚ್ಛಿಸುವುದಿಲ್ಲ.

Permission to start additional section in permanantly unaided private P.U.Colleges

1074 (1568)

Sri.U.R. Sabhapathi (Udupi)

Will the Minister fo;r Primary & Secondary Education be Pleased to State

a) Whether it has come to the notice of the Government to accord permission to start additional sectionin permanently unaided private P.U.Colleges ?

b) If so, why Government is not according permission to start additional section in private aided P.U. Colleges ?

c) Whether Government take immediate action to start additional section in private aided P.U.Colleges in the interest of the students ?

Sri. H.G. Govende Gowda (Minister for Primary & Secondary Education)

a) 'Yes'

b & c) The matter is under examination.

ಗ್ರಾಮ ಪಂಚಾಯತಿಗಳ ಪುನರ್ ರಚನೆ

1075 (1571)

ಶ್ರೀ ಯು ಆರ್. ಸಭಾಪತಿ (ಉಡುಪಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಪುನರ್ ರಚನೆ ಉದ್ದೇಶದಿಂದ ಪಂಚಾಯತ್

ಚುನಾವಣೆಯನ್ನು ಮುಂದೂಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಪುನರ್ ರಚನೆ ಪ್ರಕ್ರಿಯೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು ಯಾವುವು ?

ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಗ್ರಾಮ ಪಂಚಾಯತಿಗಳನ್ನು ಪುನರ್ ರಚನೆ ಮಾಡಲಾಗುತ್ತಿದೆ.

ಆ) ಇಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 4 ಮತ್ತು 5 ಕ್ಕೆ ರಾಜ್ಯ ಸರ್ಕಾರವು ತಿದ್ದುಪಡಿ ಮಾಡಿ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ 1999ನ್ನು ಜಾರಿಗೆ ತಂದಿದ್ದು ಅದರಂತೆ ಗ್ರಾಮ ಪಂಚಾಯತಿ ಪ್ರದೇಶಗಳ ಪುನರ್ ವಿಂಗಡಣೆ ಕಾರ್ಯವು ಪ್ರಗತಿಯಲ್ಲಿದೆ.

ಪಂಚಾಯತಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರುಗಳ ವೇತನ ಪರಿಷ್ಕರಣ

1077 (1574)

ಶ್ರೀ ಜಿ.ವಿ.ಶ್ರೀ ರಾಮರೆಡ್ಡಿ (ಬಾಗೇನಲ್ಲಿ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದ ಪಂಚಾಯತ್‌ಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರುಗಳಿಗೆ ವೇತನ ಹೆಚ್ಚಿಸುವ ಬಗ್ಗೆ ಸರ್ಕಾರವು ಭರವಸೆಗಳನ್ನು ನೀಡಿದ್ದು ನಿಜವೇ ?

ಆ) ಹಾಗಿದ್ದಲ್ಲಿ ಈ ಭರವಸೆಗಳನ್ನು ಈಡೇರಿಸಲು ಸರ್ಕಾರಕ್ಕಿರುವ ಅಡ್ಡಿ ಆತಂಕಗಳೇನು ?

ಇ) ಈ ಭರವಸೆಗಳನ್ನು ಇನ್ನೂ ಎಷ್ಟು ಅವಧಿಯಲ್ಲಿ ಈಡೇರಿಸಲು ಸರ್ಕಾರ ಉದ್ದೇಶಿಸಲಾಗಿದೆ ?

ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಪರಿಶೀಲನೆಯಲ್ಲಿದೆ

ಆ) ಗ್ರಾಮಪಂಚಾಯತ್ ನೌಕರರ ವೇತನವನ್ನು ಗ್ರಾಮ ಪಂಚಾಯತಿಗಳ ಉತ್ಪನ್ನದಿಂದ ಭರಿಸಬೇಕಾಗಿದ್ದು ಹಾಗೂ ಸಿಬ್ಬಂದಿ ವೆಚ್ಚವು ಆದಾಯದ ಶೇ 40ಕ್ಕಿಂತ ಮೀರಬಾರದೆಂದು ನಿಯಮದಲ್ಲಿ ತಿಳಿಸಿರುವುದರಿಂದ ಈ ಬಗ್ಗೆ ವಿವರವಾಗಿ ಪರಿಶೀಲಿಸಬೇಕಾಗಿರುತ್ತದೆ.

ಇ) ಶೀಘ್ರದಲ್ಲೇ ಈಡೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳಿಗೆ ವೈದ್ಯರು , ನರ್ಸ್‌ಗಳ ನೇಮಕಾತಿ

1078 (1575)

ಶ್ರೀ ಜಿ.ವಿ.ಶ್ರೀ ರಾಮರೆಡ್ಡಿ (ಬಾಗೇಪಲ್ಲಿ)

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಆರೋಗ್ಯ ಘಟಕಗಳ ಸಂಖ್ಯೆ ಎಷ್ಟು ? ಜಿಲ್ಲಾವಾರು)

ಆ) ಈ ಆರೋಗ್ಯ ಕೇಂದ್ರಃ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರು ನರ್ಸ್‌ಗಳು ಫಾರ್ಮಾಸಿಸ್ಟ್‌ಗಳ ಸಂಖ್ಯೆ ಎಷ್ಟು ?

ಇ) ವೈದ್ಯರು ನರ್ಸ್‌ಗಳು , ಫಾರ್ಮಸಿಸ್ಟ್‌ಗಳನ್ನು ಆರೋಗ್ಯ ಘಟಕಗಳಿಗೆ ನೇಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?